# ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974

(ಕರ್ನಾಟಕ ರಾಜ್ಯಪತ್ರ, ಗುರುವಾರ, ಮಾರ್ಚ್ 22, 2001 ಭಾಗ–4ಎ ಪುಟ 353 ರಿಂದ 366ರವರೆಗೆ ಪ್ರಕಟಿತವಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಸಕ್ಷಮ ಅಧಿಕಾರಿಗಳ ನೇಮಕ
4. ಹೊರಹಾಕುವ ಆದೇಶದ ವಿರುದ್ಧ ಕಾರಣ ತೋರಿಸಲು ನೋಟೀಸನ್ನು ಹೊರಡಿಸುವುದು
5. ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವುದು
6. ಅನಧಿಕೃತ ಅಧಿಭೋಗದಾರರು ಸಾರ್ವಜನಿಕ ಆವರಣಗಳಲ್ಲಿ ಬಿಟ್ಟುಹೋಗಿರುವ ಸ್ವತ್ತಿನ ವಿಲೆ
7. ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟ ಬಾಡಿಗೆಯನ್ನು ಅಥವಾ ಹಾನಿ ಪರಿಹಾರಗಳನ್ನು ಭೂಕಂದಾಯದ ಬಾಕಿಗಳಂತೆ ವಸೂಲು ಮಾಡಲು ಅಧಿಕಾರ
8. ನೌಕರನ ಸಂಬಳದಿಂದ ಅಥವಾ ಮಜೂರಿಗಳಿಂದ ಮುರಿದುಕೊಳ್ಳುವ ಮೂಲಕ ಬಾಡಿಗೆಯನ್ನು ವಸೂಲಿ ಮಾಡುವುದು
9. ಸಕ್ಷಮ ಅಧಿಕಾರಿಗಳ ಅಧಿಕಾರಗಳು
10. ಅಪೀಲುಗಳು
11. ಆದೇಶಗಳ ಅಂತಿಮತೆ
12. ಅಪರಾಧಗಳು ಮತ್ತು ದಂಡನೆ
13. ಮಾಹಿತಿಯನ್ನು ಪಡೆಯಲು ಅಧಿಕಾರ
14. ವಾರಸುದಾರರು ಮತ್ತು ಕಾನೂನು ಸಮ್ಮತ ಪ್ರತಿನಿಧಿಗಳ ಹೊಣೆಗಾರಿಕೆ
15. ಬಾಡಿಗೆ, ಇತ್ಯಾದಿಗಳನ್ನು ಭೂಕಂದಾಯದ ಬಾಕಿಯಂತೆ ವಸೂಲಿ ಮಾಡುವುದು
16. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ
17. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
18. ನಿಯಮ ರಚನಾಧಿಕಾರ
19. ನಿರಸನ ಮತ್ತು ಉಳಿಸುವಿಕೆಗಳು

# ಕರ್ನಾಟಕ ಅಧಿನಿಯಮ, 1974ರ ಸಂಖ್ಯೆ 32

(1974ರ ಅಕ್ಟೋಬರ್ ಏಳನೇ ದಿನದಂದು ಕರ್ನಾಟಕ ವಿಶೇಷ ರಾಜಪತ್ರದಲ್ಲಿ ಮೊದಲು ಪ್ರಕಟವಾಯಿತು)

# ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974

(1977ರ 1, 1981ರ 28, 1986ರ 49, 1991ರ 16, 1993ರ 4, 1995ರ 15, 1999ರ 22 ಮತ್ತು 2000ದ 14ರ ಮೂಲಕ ತಿದ್ದುಪಡಿಯಾದಂತೆ)

(1974ರ ಅಕ್ಟೋಬರ್ ಮೊದಲನೇ ದಿನದಂದು ರಾಷ್ಟ್ರಪತಿಯವರ ಸಮ್ಮತಿ ಪಡೆದಿದೆ)

**ಸಾರ್ವಜನಿಕ ಆವರಣಗಳಿಂದ ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ ಬಗ್ಗೆ ಮತ್ತು ಕೆಲವು ಪ್ರಾಸಂಗಿಕ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.**

ಸಾರ್ವಜನಿಕ ಆವರಣಗಳಿಂದ ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಇದು ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

(3) ಇದು ಈ ಕೂಡಲೇ ಜಾರಿಗೆ ಬರತಕ್ಕ 12 ಮತ್ತು 19ನೇ ಪ್ರಕರಣಗಳನ್ನು ಹೊರತುಪಡಿಸಿ, 1962ರ ಜನವರಿ 18ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಕ್ಷಮ ಅಧಿಕಾರಿ" ಎಂದರೆ, 3ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರ ಸಕ್ಷಮ ಅಧಿಕಾರಿ ಎಂದು ನೇಮಕ ಮಾಡಿರುವ ಅಧಿಕಾರಿ;

(ಬಿ) "ನಿಗಮಿತ ಪ್ರಾಧಿಕಾರ" ಎಂದರೆ, ಈ ಪ್ರಕರಣದ (ಇ) ಖಂಡದ (ii) ಮತ್ತು (iii)ನೇ ಉಪಖಂಡಗಳಲ್ಲಿ ಉಲ್ಲೇಖಿತವಾಗಿರುವ ಯಾವುದೇ ಕಂಪನಿ ಅಥವಾ ನಿಗಮ;

(ಸಿ) "ಆವರಣಗಳು" ಎಂದರೆ, ಯಾವುದೇ ಭೂಮಿ ಅಥವಾ ಯಾವುದೇ ಕಟ್ಟಡ ಅಥವಾ ಗುಡಿಸಲು ಅಥವಾ ಕಟ್ಟಡದ ಅಥವಾ ಗುಡಿಸಲಿನ ಭಾಗ ಮತ್ತು ಅದು ಈ ಕೆಳಕಂಡವುಗಳನ್ನು ಒಳಗೊಳ್ಳುತ್ತದೆ, ಎಂದರೆ:-

(i) ಅಂತಹ ಕಟ್ಟಡಕ್ಕೆ ಅಥವಾ ಗುಡಿಸಲಿಗೆ ಅಥವಾ ಕಟ್ಟಡದ ಅಥವಾ ಗುಡಿಸಲಿನ ಭಾಗಕ್ಕೆ ಹೊಂದಿಕೊಂಡಿರುವ ತೋಟ, ನೆಲ ಮತ್ತು ಔಟ್‌ಹೌಸ್‌ಗಳು ಯಾವುದಾದರೂ ಇದ್ದರೆ, ಅವು; ಮತ್ತು

(ii) ಅಂತಹ ಕಟ್ಟಡಕ್ಕೆ ಅಥವಾ ಗುಡಿಸಲಿಗೆ ಅಥವಾ ಕಟ್ಟಡದ ಅಥವಾ ಗುಡಿಸಲಿನ ಭಾಗಕ್ಕೆ, ಅದರ ಹೆಚ್ಚಿನ ಸೌಕರ್ಯವನ್ನು ಅನುಭವಿಸಲು ಸೇರಿಸಿರುವ ಯಾವುವೇ ಜೋಡಣೆಗಳು;

(ಡಿ) “ನಿಯಮಿಸಲಾದುದು” ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) “ಸಾರ್ವಜನಿಕ ಆವರಣಗಳು” ಎಂದರೆ, ರಾಜ್ಯ ಸರ್ಕಾರಕ್ಕೆ ಸೇರಿದ ಅಥವಾ ಹಂಚಲಾದ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಅದರ ಪರವಾಗಿ ಗುತ್ತಿಗೆಯ ಮೇಲೆ ತೆಗೆದುಕೊಂಡ ಅಥವಾ ಕಡ್ಡಾಯವಾಗಿ ತೆಗೆದುಕೊಂಡ ಯಾವುವೇ ಆವರಣಗಳು ಮತ್ತು ಕೆಳಕಂಡವುಗಳಿಗೆ ಸೇರಿದ ಅಥವಾ ಅವು ಅಥವಾ ಅವುಗಳ ಪರವಾಗಿ ಗುತ್ತಿಗೆಯ ಮೇಲೆ ತೆಗೆದುಕೊಂಡ ಯಾವುವೇ ಆವರಣಗಳು ಒಳಗೊಳ್ಳುತ್ತವೆ, ಎಂದರೆ:-

(i) ಸ್ಥಳೀಯ ಪ್ರಾಧಿಕಾರ;

(ii) ಕಂಪನಿಗಳ ಅಧಿನಿಯಮ, 1955ರ (ಕೇಂದ್ರ ಅಧಿನಿಯಮ 1956ರ 1) 3ನೇ ಪ್ರಕರಣದಲ್ಲಿ ಪರಿಭಾಷಿಸಲಾದ ಯಾವ ಕಂಪನಿಯಲ್ಲಿ ರಾಜ್ಯ ಸರ್ಕಾರವು ಶೇಕಡಾ ಐವತ್ತೊಂದಕ್ಕಿಂತ ಕಡಿಮೆಯಿರದಷ್ಟು ಸಂದಾಯ ಮಾಡಿದ ಷೇರು ಬಂಡವಾಳವನ್ನು ಹೊಂದಿರುವುದೋ ಆ ಯಾವುದೇ ಕಂಪನಿ [1][ಅಥವಾ ಮೇಲೆ ಹೇಳಿದ ಕಂಪನಿಯ (ಸದರಿ ಅಧಿನಿಯಮದ ಅರ್ಥವ್ಯಾಪ್ತಿಯಲ್ಲಿ) ಯಾವುದೇ ಸಹಾಯಕ ಕಂಪನಿ;][1]

1. 2000ದ ಕರ್ನಾಟಕ ಅಧಿನಿಯಮ ಸಂಖ್ಯೆ 14ರ ಮೂಲಕ 27-4-2000ದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(iii) [1][ಕೇಂದ್ರ ಅಧಿನಿಯಮದ ಅಥವಾ][1] ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಮತ್ತು ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ (ಕಂಪನಿಗಳ ಅಧಿನಿಯಮ, 1956ರ 3ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಕಂಪನಿಯಾಗಿಲ್ಲದ) ಯಾವುದೇ ನಿಗಮ; ಮತ್ತು

1. 1977ರ ಅಧಿನಿಯಮ ಸಂಖ್ಯೆ 1ರ 2ನೇ ಪ್ರಕರಣದ ಮೂಲಕ 21-2-1977ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(iv) ರಾಜ್ಯ ಸರ್ಕಾರದ ನಿರ್ವಹಣೆಯಲ್ಲಿರುವ ಮುಜರಾಯಿ ಸಂಸ್ಥೆ ಅಥವಾ ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆ;

[1][(v) [2][ಕರ್ನಾಟಕ ರಾಜ್ಯ ವಕ್ಫ್ ಮಂಡಲಿಯಲ್ಲಿ ನೋಂದಾಯಿತವಾದ ಒಂದು ವಕ್ಫ್;][2] ಮತ್ತು

(vi) ಜಂಟಿಯಾಗಿ ರಾಜ್ಯ ಸರ್ಕಾರ ಮತ್ತು ಆಂಧ್ರ ಪ್ರದೇಶ ಸರ್ಕಾರವು, ಮತ್ತು ಆಂಧ್ರ ರಾಜ್ಯ ಅಧಿನಿಯಮ, 1953 (ಕೇಂದ್ರ ಅಧಿನಿಯಮ 1953ರ 30)ರ 66ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ಭಾರತ ಸರ್ಕಾರವು ರಚಿಸಿದ ತುಂಗಭದ್ರಾ ಮಂಡಲಿಯ ನಿರ್ವಹಣೆಯಲ್ಲಿರುವವು ಅಥವಾ ಆಡಳಿತ ನಿಯಂತ್ರಣದಲ್ಲಿರುವವು;][1]

1. (v), (vi) ಖಂಡಗಳನ್ನು 1981ರ ಕರ್ನಾಟಕ ಅಧಿನಿಯಮ ಸಂಖ್ಯೆ 28ರ ಮೂಲಕ 30-9-1980ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1999ರ ಅಧಿನಿಯಮ ಸಂಖ್ಯೆ 22ರ ಮೂಲಕ 31ನೇ ಜುಲೈ 1999ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(vii) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 28) ಅಥವಾ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 22) ಇದರ ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾನಿಲಯ;][1]

1. 1993ರ ಅಧಿನಿಯಮ ಸಂಖ್ಯೆ 4ರ ಪ್ರಕರಣ 22ರ ಮೂಲಕ ಸೇರಿಸಲಾಗಿದೆ.

**ವಿವರಣೆ.**- ಈ ಖಂಡದ ಉದ್ದೇಶಗಳಿಗಾಗಿ "ಸ್ಥಳೀಯ ಪ್ರಾಧಿಕಾರ" ಎಂದರೆ-

(ಎ) ಪೌರ ನಿಗಮ;

(ಬಿ) ಪಟ್ಟಣ ಅಥವಾ ನಗರ ಪುರಸಭಾ ಪರಿಷತ್ತು;

[1][(ಬಿಬಿ) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ, 27)ರ ಮೇರೆಗೆ ಸ್ಥಾಪಿತವಾದ ಮಾರುಕಟ್ಟೆ ಸಮಿತಿ;][1]

1. 1991ರ ಅಧಿನಿಯಮ ಸಂಖ್ಯೆ 16ರ ಪ್ರಕರಣ 59ರ ಮೂಲಕ ಸೇರಿಸಲಾಗಿದೆ.

[1][(ಸಿ) ಕರ್ನಾಟಕ ಅಭಿವೃದ್ಧಿ ಮಂಡಲಿಗಳ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 11)ರ ಮೇರೆಗೆ ಸ್ಥಾಪಿತವಾದ ಅಭಿವೃದ್ಧಿ ಮಂಡಲಿ;

[2][(ಡಿ) ಕರ್ನಾಟಕ ಪಂಚಾಯಿತಿ ರಾಜ್ಯ ಅಧಿನಿಯಮ, 1933 (1933ರ ಕರ್ನಾಟಕ ಅಧಿನಿಯಮ 14)ರ ಮೇರೆಗೆ ಸ್ಥಾಪಿಸಲಾದ ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿ;][2]

(ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 12) ಮೇರೆಗೆ ರಚಿತವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ;

(ಎಫ್) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ (1987ರ ಕರ್ನಾಟಕ ಅಧಿನಿಯಮ 34) ಮೇರೆಗೆ ರಚಿಸಲಾದ ನಗರಾಭಿವೃದ್ಧಿ ಪ್ರಾಧಿಕಾರ;][1]

1. 1993ರ ಅಧಿನಿಯಮ ಸಂಖ್ಯೆ 4ರ ಪ್ರಕರಣ 2ರ ಮೂಲಕ ಪ್ರತಿಯೋಜಿಸಲಾಗಿದೆ

2. 1995ರ ಅಧಿನಿಯಮ ಸಂಖ್ಯೆ 15ರ ಪ್ರಕರಣ 2ರ ಮೂಲಕ ಪ್ರತಿಯೋಜಿಸಲಾಗಿದೆ.

(ಎಫ್) ಯಾವುದೇ ಸಾರ್ವಜನಿಕ ಆವರಣದ ಸಂಬಂಧದಲ್ಲಿ "ಬಾಡಿಗೆ" ಎಂದರೆ, ಆವರಣಗಳ ಅಧಿಕೃತ ಅಧಿಭೋಗದಲ್ಲಿರುವುದಕ್ಕಾಗಿ ನಿಯತಕಾಲಿಕವಾಗಿ ಸಂದಾಯ ಮಾಡಬೇಕಾದ ಪ್ರತಿಫಲ; ಮತ್ತು ಅದು,-

(i) ಆವರಣಗಳ ಅಧಿಭೋಗಕ್ಕೆ ಸಂಬಂಧಿಸಿದಂತೆ ವಿದ್ಯುಚ್ಛಕ್ತಿ, ನೀರು ಅಥವಾ ಯಾವುದೇ ಇತರ ಸೇವೆಗಳಿಗೆ ಯಾವುದೇ ಚಾರ್ಜು;

(ii) ಆವರಣಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ (ಯಾವುದೇ ಹೆಸರಿನಿಂದ ಕರೆಯಲಿ) ಯಾವುದೇ ತೆರಿಗೆಯನ್ನು ಅಂಥ ಚಾರ್ಜನ್ನು ಅಥವಾ ತೆರಿಗೆಯನ್ನು ರಾಜ್ಯ ಸರ್ಕಾರವು, ಸ್ಥಳೀಯ ಪ್ರಾಧಿಕಾರವು ಅಥವಾ ನಿಗಮಿತ ಪ್ರಾಧಿಕಾರವು ಸಂದಾಯ ಮಾಡಬೇಕಾಗಿದ್ದರೆ, ಒಳಗೊಳ್ಳುತ್ತದೆ;

(ಜಿ) ಯಾವುದೇ ಸಾರ್ವಜನಿಕ ಆವರಣಗಳ ಸಂಬಂಧದಲ್ಲಿ "ಅನಧಿಕೃತ ಅಧಿಭೋಗ" ಎಂದರೆ, ಸಾರ್ವಜನಿಕ ಆವರಣಗಳ ಅಧಿಭೋಗಕ್ಕೆ ಅಧಿಕಾರವಿಲ್ಲದೆ, ಯಾರೇ ವ್ಯಕ್ತಿಯು ಅಂಥ ಆವರಣಗಳ ಅಧಿಭೋಗದಲ್ಲಿರುವುದು ಮತ್ತು ಅದು ಯಾವ ಅಧಿಕಾರದ ಮೇರೆಗೆ (ಕೊಡುಗೆಯ ರೂಪದಲ್ಲಿರಲಿ ಅಥವಾ ವರ್ಗಾವಣೆಯ ಯಾವುದೇ ಇತರ ರೂಪದಲ್ಲಿರಲಿ) ಯಾವ ವ್ಯಕ್ತಿಗೆ ಆ ಆವರಣಗಳನ್ನು ಅಧಿಭೋಗಿಸಲು ಅನುಮತಿಸಲಾಗಿತ್ತೋ ಆ ಅಧಿಕಾರವು ಮುಕ್ತಾಯವಾದ ತರುವಾಯ ಅಥವಾ ಇತರ ಯಾವುದೇ ಕಾರಣಕ್ಕಾಗಿ ಕೊನೆಗೊಳಿಸಿದ ತರುವಾಯವೂ, ಆ ವ್ಯಕ್ತಿಯ ಸಾರ್ವಜನಿಕ ಆವರಣಗಳ ಅಧಿಭೋಗದ ಮುಂದುವರಿಕೆಯನ್ನು ಒಳಗೊಳ್ಳುತ್ತದೆ.

**3. ಸಕ್ಷಮ ಅಧಿಕಾರಿಗಳ ನೇಮಕ.–** ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸಿ,–

(ಎ) ಈ ಅಧಿನಿಯಮದ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ,–

(i) ತನ್ನ ಆವರಣಗಳಿಗೆ ಸಂಬಂಧಪಟ್ಟಂತೆ, ರಾಜ್ಯ ಸಿವಿಲ್ ಸೇವೆಗಳ [1]['ಬಿ' ಗುಂಪಿನ][1] ಅಧಿಕಾರಿಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳನ್ನು;

1. 1986ರ ಅಧಿನಿಯಮ ಸಂಖ್ಯೆ 49ರ ಪ್ರಕರಣ 2ರ ಮೂಲಕ ಪ್ರತಿಯೋಜಿಸಲಾಗಿದೆ.

(ii) ಸ್ಥಳೀಯ ಪ್ರಾಧಿಕಾರದ ಯಾವುದೇ ಆವರಣಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ ಪ್ರಾಧಿಕಾರದ ಅಧಿಕಾರಿಗಳನ್ನು; [1][ಅಥವಾ ರಾಜ್ಯ ಸಿವಿಲ್ ಸೇವೆಗಳ 'ಬಿ' ಗುಂಪಿನ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಂಥ ಅಧಿಕಾರಿಯನ್ನು;][1] [2][xxx][2]

1. 1993ರ ಅಧಿನಿಯಮ ಸಂಖ್ಯೆ 4ರ ಪ್ರಕರಣ 2ರ ಮೂಲಕ ಸೇರಿಸಲಾಗಿದೆ.

2. 1981ರ ಅಧಿನಿಯಮ ಸಂಖ್ಯೆ 28ರ 3ನೇ ಪ್ರಕರಣದ ಮೂಲಕ 30–9–1980ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(iii) ನಿಗಮಿತ ಪ್ರಾಧಿಕಾರದ ಯಾವುದೇ ಆವರಣಕ್ಕೆ ಸಂಬಂಧಪಟ್ಟಂತೆ ನಿಗಮಿತ ಪ್ರಾಧಿಕಾರದ ಅಧಿಕಾರಿಗಳನ್ನು; [1][ಮತ್ತು][1]

1. 1981ರ ಅಧಿನಿಯಮ ಸಂಖ್ಯೆ 28ರ 3ನೇ ಪ್ರಕರಣದ ಮೂಲಕ 30–9–1980 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(iv) ಯಾವುದೇ ಇತರ ಆವರಣದ ಸಂಬಂಧದಲ್ಲಿ, ರಾಜ್ಯ ಸಿವಿಲ್ ಸೇವೆಯ ಅಥವಾ ಯಾವುದೇ ಇತರ ಪ್ರಾಧಿಕಾರದ ಅಧಿಕಾರಿಯನ್ನು][1]

–ನೇಮಕ ಮಾಡಬಹುದು; ಮತ್ತು

1. 1981ರ ಅಧಿನಿಯಮ ಸಂಖ್ಯೆ 28ರ 3ನೇ ಪ್ರಕರಣದ ಮೂಲಕ 30–9–1980 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) ಸಕ್ಷಮ ಅಧಿಕಾರಿಗಳು ಯಾವ ಸ್ಥಳೀಯ ಪರಿಮಿತಿಗಳೊಳಗೆ ಅಥವಾ ಸಾರ್ವಜನಿಕ ಆವರಣಗಳ ಯಾವ ಪ್ರವರ್ಗಗಳಿಗೆ ಸಂಬಂಧಪಟ್ಟಂತೆ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅವರಿಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸತಕ್ಕದ್ದೋ ಮತ್ತು ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದೋ ಅಂಥ ಪರಿಮಿತಿ ಅಥವಾ ಪ್ರವರ್ಗಗಳನ್ನು ನಿರ್ಧರಿಸಬಹುದು.

**4. ಹೊರಹಾಕುವ ಆದೇಶದ ವಿರುದ್ಧ ಕಾರಣ ತೋರಿಸಲು ನೋಟೀಸನ್ನು ಹೊರಡಿಸುವುದು.–** (1) ಯಾವುದೇ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಲ್ಲಿರುವಂಥ ಯಾರೇ ವ್ಯಕ್ತಿಗಳನ್ನು ಹೊರಹಾಕಬೇಕೆಂದು ಸಕ್ಷಮ ಅಧಿಕಾರಿಯು ಅಭಿಪ್ರಾಯಪಟ್ಟರೆ, ಅವನು ಹೊರಹಾಕುವ ಆದೇಶವನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣ ತೋರಿಸಲು ಸಂಬಂಧಪಟ್ಟ ಎಲ್ಲ ವ್ಯಕ್ತಿಗಳನ್ನು ಕೇಳಿ, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವ ರೀತಿಯಲ್ಲಿ ಲಿಖಿತ ನೋಟೀಸನ್ನು ಹೊರಡಿಸತಕ್ಕದ್ದು.

(2) ಆ ನೋಟೀಸು,–

(ಎ) ಹೊರಹಾಕುವ ಆದೇಶವನ್ನು ಯಾವ ಆಧಾರಗಳ ಮೇಲೆ ಮಾಡಲು ಉದ್ದೇಶಿಸಲಾಗಿದೆ ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು; ಮತ್ತು

(ಬಿ) ಸಂಬಂಧಪಟ್ಟ ಎಲ್ಲ ವ್ಯಕ್ತಿಗಳಿಗೆ, ಎಂದರೆ, ಸಾರ್ವಜನಿಕ ಆವರಣಗಳ ಅಧಿಭೋಗದಲ್ಲಿರುವ ಅಥವಾ ಅಧಿಭೋಗದಲ್ಲಿರಬಹುದಾದ ಅಥವಾ ಅದರಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಎಲ್ಲ ವ್ಯಕ್ತಿಗಳಿಗೆ, ನೋಟೀಸನ್ನು ನೀಡಿದ ದಿನಾಂಕದಿಂದ ಹತ್ತು ದಿನಗಳಿಗೆ ಮುಂಚಿತವಲ್ಲದ ದಿನಾಂಕದಂದು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದಂಥ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಪ್ರಸ್ತಾವಿತ ಆದೇಶದ ವಿರುದ್ಧ ಕಾರಣವೇನಾದರೂ ಇದ್ದಲ್ಲಿ ಆ ಕಾರಣವನ್ನು ತೋರಿಸುವಂತೆ ಅಗತ್ಯಪಡಿಸತಕ್ಕದ್ದು.

(3) ಸಕ್ಷಮ ಅಧಿಕಾರಿಯು ನೋಟೀಸನ್ನು ಸಾರ್ವಜನಿಕ ಆವರಣಗಳ ಹೊರಬಾಗಿಲಿನ ಮೇಲೆ ಅಥವಾ ಎದ್ದು ಕಾಣುವ ಯಾವುದೇ ಇತರ ಭಾಗದ ಮೇಲೆ ಅಂಟಿಸುವ ವ್ಯವಸ್ಥೆ ಮಾಡುವ ಮೂಲಕ ಮತ್ತು ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಅದು ಜಾರಿಗೊಳ್ಳುವಂತೆ ಮಾಡತಕ್ಕದ್ದು, ಆ ತರುವಾಯ ನೋಟೀಸನ್ನು ಸಂಬಂಧಪಟ್ಟ ಎಲ್ಲ ವ್ಯಕ್ತಿಗಳಿಗೆ ಯುಕ್ತವಾಗಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

(4) ಯಾರೇ ವ್ಯಕ್ತಿಗಳು, ಸಾರ್ವಜನಿಕ ಆವರಣಗಳ ಅಧಿಭೋಗದಲ್ಲಿದ್ದಾರೆಂದು ಸಕ್ಷಮ ಅಧಿಕಾರಿಗೆ ಗೊತ್ತಾದರೆ ಅಥವಾ ಹಾಗೆ ನಂಬಲು ಕಾರಣಗಳಿದ್ದರೆ, ಆಗ ಆ ಅಧಿಕಾರಿಯು, (3)ನೇ ಉಪ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಅಂಥ ಪ್ರತಿಯೊಬ್ಬ ವ್ಯಕ್ತಿಗೆ ನೋಂದಾಯಿತ ಅಂಚೆಯ ಮೂಲಕ ಅಥವಾ ಆ ವ್ಯಕ್ತಿಗೆ ಒಪ್ಪಿಸುವ ಅಥವಾ ತಲುಪಿಸುವ ಮೂಲಕ ನೋಟೀಸಿನ ಒಂದು ಪ್ರತಿಯು ಜಾರಿಯಾಗುವಂತೆ ಮಾಡತಕ್ಕದ್ದು, ಅಥವಾ ಮೇಲೆ ಹೇಳಿದ ರೀತಿಯಲ್ಲಿ ನೋಟೀಸನ್ನು ಜಾರಿ ಮಾಡಲು ತಪ್ಪಿದಲ್ಲಿ ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಅದನ್ನು ಜಾರಿ ಮಾಡತಕ್ಕದ್ದು.

**5. ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವುದು.–** (1) 4ನೇ ಪ್ರಕರಣದ ಮೇರೆಗೆ ನೀಡಿದ ನೋಟೀಸಿಗೆ ಅನುಸಾರವಾಗಿ ಯಾರೇ ವ್ಯಕ್ತಿಯು, ತೋರಿಸಿದ ಕಾರಣವೇನಾದರೂ ಇದ್ದರೆ ಅದನ್ನು ಮತ್ತು ಅದರ ಸಮರ್ಥನೆಯಾಗಿ, ಅವನು ಹಾಜರುಪಡಿಸಬಹುದಾದ ಯಾವುದೇ ಸಾಕ್ಷ್ಯವೇನೇದರೂ ಇದ್ದರೆ ಅದನ್ನು ಪರಿಶೀಲಿಸಿದ ತರುವಾಯ ಮತ್ತು ಅವನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ತರುವಾಯ, ಸಾರ್ವಜನಿಕ ಆವರಣಗಳು ಅನಧಿಕೃತ ಅಧಿಭೋಗದಲ್ಲಿವೆಯೆಂದು ಸಕ್ಷಮ ಅಧಿಕಾರಿಗೆ ಮನದಟ್ಟಾದರೆ, ಅವನು ಹೊರಹಾಕುವ ಉದ್ದೇಶಕ್ಕಾಗಿ ಒಂದು ದಿನಾಂಕವನ್ನು ನಿಗದಿಪಡಿಸಬಹುದು ಮತ್ತು ಅವನು ಹೊರಹಾಕುವ ಆದೇಶದಲ್ಲಿ ಕಾರಣಗಳನ್ನು ದಾಖಲಿಸಿ ಆ ಸಾರ್ವಜನಿಕ ಆವರಣಗಳ ಅಥವಾ ಅದರ ಯಾವುದೇ ಭಾಗದ ಅಧಿಭೋಗದಲ್ಲಿರಬಹುದಾದಂಥ ಎಲ್ಲ ವ್ಯಕ್ತಿಗಳು ಅವುಗಳನ್ನು ಖಾಲಿ ಮಾಡತಕ್ಕದ್ದೆಂದು ನಿರ್ದೇಶಿಸಿ ಹೊರಹಾಕುವ ಆದೇಶವನ್ನು ಮಾಡಬಹುದು ಮತ್ತು ಆದೇಶದ ಒಂದು ಪ್ರತಿಯನ್ನು ಸಾರ್ವಜನಿಕ ಆವರಣಗಳ ಹೊರಬಾಗಿಲಿನ ಮೇಲೆ ಅಥವಾ ಎದ್ದು ಕಾಣುವ ಅದರ ಯಾವುದೇ ಭಾಗದಲ್ಲಿ ಅಂಟಿಸುವ ವ್ಯವಸ್ಥೆ ಮಾಡತಕ್ಕದ್ದು.

(2) (1)ನೇ ಉಪ ಪ್ರಕರಣದ ಮೇರೆಗೆ ಮಾಡಲಾದ ಆದೇಶವನ್ನು ಅಂಟಿಸಿದ ದಿನಾಂಕದಿಂದ ನಲವತ್ತೈದು ದಿನಗಳೊಳಗೆ ಯಾರೇ ವ್ಯಕ್ತಿಯು, ಹೊರಹಾಕುವ ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ, ಸಕ್ಷಮ ಅಧಿಕಾರಿಯು ಅಥವಾ ಈ ಬಗ್ಗೆ ಸಕ್ಷಮ ಪ್ರಾಧಿಕಾರಿಯು ಯುಕ್ತವಾಗಿ ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಯು, ಆ ವ್ಯಕ್ತಿಯನ್ನು ಸಾರ್ವಜನಿಕ ಆವರಣಗಳಿಂದ ಹೊರಹಾಕಬಹುದು ಮತ್ತು ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯಕವಾಗಬಹುದಾದಂತಹ ಬಲವನ್ನು ಪ್ರಯೋಗಿಸಬಹುದು.

**6. ಅನಧಿಕೃತ ಅಧಿಭೋಗದಾರರು ಸಾರ್ವಜನಿಕ ಆವರಣಗಳಲ್ಲಿ ಬಿಟ್ಟುಹೋಗಿರುವ ಸ್ವತ್ತಿನ ವಿಲೆ.–** (1) 5ನೇ ಪ್ರಕರಣದ ಮೇರೆಗೆ ಯಾವುವೇ ಸಾರ್ವಜನಿಕ ಆವರಣಗಳಿಂದ ಯಾರೇ ವ್ಯಕ್ತಿಗಳನ್ನು ಹೊರಹಾಕಿರುವಲ್ಲಿ, ಸಕ್ಷಮ ಅಧಿಕಾರಿಯು, ಯಾವ ವ್ಯಕ್ತಿಗಳಿಂದ ಸಾರ್ವಜನಿಕ ಆವರಣಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆಯೋ ಆ ವ್ಯಕ್ತಿಗಳಿಗೆ ಹದಿನಾಲ್ಕು ದಿನಗಳ ನೋಟೀಸು ನೀಡಿದ ತರುವಾಯ ಮತ್ತು ಆ ಸ್ಥಳದಲ್ಲಿ ಪ್ರಸಾರದಲ್ಲಿರುವ ಕನಿಷ್ಠ ಒಂದು ಸುದ್ದಿಪತ್ರಿಕೆಯಲ್ಲಿ ಆ ನೋಟೀಸನ್ನು ಪ್ರಕಟಿಸಿದ ತರುವಾಯ ಮತ್ತು ಆ ಸ್ಥಳದಲ್ಲಿ ನೋಟೀಸಿನ ಒಳಾಂಶಗಳ ಬಗ್ಗೆ ಡಂಗೂರ ಸಾರಿದ ತರುವಾಯ ಅಂಥ ಆವರಣಗಳಲ್ಲಿ ಉಳಿದಿರುವ ಯಾವುದೇ ಸ್ವತ್ತನ್ನು ತೆಗೆದುಹಾಕಬಹುದು ಅಥವಾ ತೆಗೆದುಹಾಕಿಸಬಹುದು ಅಥವಾ ಸಾರ್ವಜನಿಕ ಹರಾಜಿನ ಮೂಲಕ ವಿಲೆ ಮಾಡಬಹುದು.

(2) ಯಾವುದೇ ಸ್ವತ್ತನ್ನು (1)ನೇ ಉಪಪ್ರಕರಣದ ಮೇರೆಗೆ ಮಾರಾಟ ಮಾಡಿದ್ದರೆ, ಮಾರಾಟದಿಂದ ಬಂದ ಹಣದಲ್ಲಿ ಮಾರಾಟದ ವೆಚ್ಚವನ್ನು ಮುರಿದುಕೊಂಡ ತರುವಾಯ ಮತ್ತು ಬಾಡಿಗೆಯ ಬಾಕಿಗಳ, ಹಾನಿಗಳ ಅಥವಾ ವೆಚ್ಚಗಳ ಕಾರಣದಿಂದಾಗಿ ರಾಜ್ಯ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ನಿಗಮಿತ ಪ್ರಾಧಿಕಾರಕ್ಕೆ ಬಾಕಿ ಮೊಬಲಗು ಯಾವುದಾದರೂ ಇದ್ದರೆ ಅದನ್ನು ಮುರಿದುಕೊಂಡ ತರುವಾಯ ಆ ಮೊಬಲಗಿಗೆ ಹಕ್ಕುದಾರರೆಂದು ಸಕ್ಷಮ ಅಧಿಕಾರಿಗೆ ಕಂಡುಬರಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದು:

ಪರಂತು, ಉಳಿದಿರುವ ಮೊಬಲಗನ್ನು ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡಬೇಕಾಗಿದೆಯೆಂಬ ಬಗ್ಗೆ ಅಥವಾ ಅದನ್ನು ಹಂಚಿಕೆ ಮಾಡುವ ಬಗ್ಗೆ ಸಕ್ಷಮ ಅಧಿಕಾರಿಗೆ ನಿರ್ಧರಿಸಲು ಸಾಧ್ಯವಾಗದಿದ್ದರೆ ಅವನು ಸಕ್ಷಮ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಲಯಕ್ಕೆ ಅಂಥ ವಿವಾದವನ್ನು ಅಭಿಪ್ರಾಯ ಕೋರಿ ಕಳಹಿಸಬಹುದು ಮತ್ತು ಅದರ ಮೇಲೆ ಸಿವಿಲ್ ನ್ಯಾಯಾಲಯವು ಕೈಗೊಳ್ಳುವ ತೀರ್ಮಾನ ಅಂತಿಮವಾಗಿರತಕ್ಕದ್ದು.

**7. ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟ ಬಾಡಿಗೆ ಅಥವಾ ಹಾನಿ ಪರಿಹಾರಗಳನ್ನು ಭೂಕಂದಾಯದ ಬಾಕಿಗಳಂತೆ ವಸೂಲು ಮಾಡಲು ಅಧಿಕಾರ.–** (1) ಯಾವುವೇ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟಂತೆ ಯಾರೇ ವ್ಯಕ್ತಿಯು, ರಾಜ್ಯ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ನಿಗಮಿತ ನಿಕಾಯಕ್ಕೆ ಸಂದಾಯ ಮಾಡಬೇಕಾದ ಬಾಡಿಗೆಯು ಬಾಕಿ ಇದ್ದರೆ, ಸಕ್ಷಮ ಅಧಿಕಾರಿಯು, ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಮತ್ತು ಅಷ್ಟು ಕಂತುಗಳಲ್ಲಿ ಅದನ್ನು ಸಂದಾಯ ಮಾಡಲು ಆ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(2) ಯಾರೇ ವ್ಯಕ್ತಿಯು, ಯಾವುವೇ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಲ್ಲಿ ಇದ್ದ ಅಥವಾ ಯಾವುದೇ ಕಾಲಕ್ಕೆ ಇರುವ ಸಂದರ್ಭದಲ್ಲಿ, ಸಕ್ಷಮ ಅಧಿಕಾರಿಯು, ಅಂತಹ ಆವರಣಗಳ ಬಳಕೆಯು ಅಥವಾ ಅಧಿಭೋಗದ ನಿಮಿತ್ತ ಆಗಿರಬಹುದಾದ ಹಾನಿಗಳನ್ನು, ನಿಯಮಿಸಬಹುದಾದಂಥ ಹಾನಿ ನಿರ್ಧರಣಾ ತತ್ವಗಳನ್ನು ಗಮನದಲ್ಲಿಟ್ಟುಕೊಂಡು, ನಿರ್ಧರಣೆ ಮಾಡಬಹುದು ಮತ್ತು ಆದೇಶವನ್ನು ಹೊರಡಿಸಿ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಮತ್ತು ಅಷ್ಟು ಕಂತುಗಳಲ್ಲಿ ಹಾನಿ ಪರಿಹಾರಗಳನ್ನು ಸಂದಾಯ ಮಾಡುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(3) ಯಾರೇ ವ್ಯಕ್ತಿಯ ವಿರುದ್ಧ (1)ನೇ ಉಪ ಪ್ರಕರಣದ ಅಥವಾ (2)ನೇ ಉಪ ಪ್ರಕರಣದ ಮೇರೆಗಿನ ಆದೇಶವನ್ನು ಏಕೆ ಮಾಡಬಾರದು ಎಂಬ ಬಗ್ಗೆ ನೋಟೀಸಿನಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಕಾಲದೊಳಗೆ ಕಾರಣ ತೋರಿಸುವಂತೆ ಕೋರುವ ನೋಟೀಸನ್ನು ಹೊರಡಿಸುವವರೆಗೆ ಮತ್ತು ಆ ತರುವಾಯ ಮತ್ತು ಆ ಬಗ್ಗೆ ಅವನ ಆಕ್ಷೇಪಣೆಗಳೇನಾದರೂ ಇದ್ದರೆ ಅವುಗಳನ್ನು ಮತ್ತು ಅದಕ್ಕೆ ಪೂರಕವಾಗಿ ಅವನು ಹಾಜರುಪಡಿಸಬಹುದಾದಂಥ ಯಾವುದೇ ಸಾಕ್ಷ್ಯವನ್ನು ಸಕ್ಷಮ ಅಧಿಕಾರಿಯು ಪರ್ಯಾಲೋಚಿಸುವವರೆಗೆ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

**8. ನೌಕರನ ಸಂಬಳದಿಂದ ಅಥವಾ ಮಜೂರಿಗಳಿಂದ ಮುರಿದಕೊಳ್ಳುವ ಮೂಲಕ ಬಾಡಿಗೆಯನ್ನು ವಸೂಲಿ ಮಾಡುವುದು.–** 7ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಯಾವ ವ್ಯಕ್ತಿಗೆ ಸಾರ್ವಜನಿಕ ಆವರಣಗಳನ್ನು ಹಂಚಿಕೆ ಮಾಡಲಾಗಿದೆಯೋ ಆ ವ್ಯಕ್ತಿಯು, ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಥವಾ ನಿಗಮಿತ ಪ್ರಾಧಿಕಾರದ ನೌಕರನಾಗಿರುವಲ್ಲಿ ಮತ್ತು ಅವನಿಗೆ ಹಂಚಲಾದ ಅಂಥ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟಂತೆ ಅವನು ಸಂದಾಯ ಮಾಡಬೇಕಾಗಿರುವ ಬಾಡಿಗೆಯು ಬಾಕಿ ಇದ್ದರೆ, ಸಕ್ಷಮ ಅಧಿಕಾರಿಯು ಆ ಬಗ್ಗೆ ಲಿಖಿತದಲ್ಲಿ ಕೋರಿಕೆ ಸಲ್ಲಿಸಿದ ಮೇಲೆ ಅಂತಹ ವ್ಯಕ್ತಿಗೆ ಸಂದಾಯ ಮಾಡಬೇಕಾಗಿರುವ ಸಂಬಳದಿಂದ ಅಥವಾ ಮಜೂರಿಗಳಿಂದ ಅಂತಹ ಆವರಣಗಳಿಗೆ ಸಂಬಂಧಪಟ್ಟಂತೆ ಬಾಕಿಯಿರುವ ಬಾಡಿಗೆ ಮೊಬಲಗನ್ನು,

ಮುರಿದುಕೊಳ್ಳುವ ಕ್ರಮಕ್ಕೆ ಬದ್ಧನಾಗಿರತಕ್ಕದ್ದು, ಅಂತಹ ಕೋರಿಕೆಯನ್ನು ಸ್ವೀಕರಿಸಿದ ಮೇಲೆ, ಸಂದರ್ಭಾನುಸಾರ ಸರ್ಕಾರಿ ಇಲಾಖೆಯ ಮುಖ್ಯಸ್ಥನು ಅಥವಾ ಅಂಥ ವ್ಯಕ್ತಿಯು, ಯಾವ ಅಧಿಕಾರಿಯ ಅಧೀನದಲ್ಲಿ ನಿಯೋಜಿತನಾಗಿರುವನೋ ಆ ಅಧಿಕಾರಿಯು ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಯು ಅಥವಾ ಅಂತಹ ವ್ಯಕ್ತಿಯ ಸಂಬಳವನ್ನು ಬಟವಾಡೆ ಮಾಡುವ ನಿಗಮಿತ ಪ್ರಾಧಿಕಾರಿಯು ಆ ಕೋರಿಕೆಯಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ಅಂತಹ ವ್ಯಕ್ತಿಗೆ ಸಂದಾಯ ಮಾಡಬೇಕಾಗಿರುವ ಸಂಬಳದಿಂದ ಅಥವಾ ಮಜೂರಿಗಳಿಂದ ಮುರಿದುಕೊಳ್ಳತಕ್ಕದ್ದು ಮತ್ತು ಹಾಗೆ ಮುರಿದುಕೊಳ್ಳಲಾದ ಮೊಬಲಗನ್ನು ಅವನಿಂದ ಬಾಕಿ ಇರುವ ಮೊಬಲಗಿನ ತೀರಿಕೆಯಾಗಿ ಸಕ್ಷಮ ಪ್ರಾಧಿಕಾರಿಗೆ ಸಂದಾಯ ಮಾಡತಕ್ಕದ್ದು.

**9. ಸಕ್ಷಮ ಅಧಿಕಾರಿಗಳ ಅಧಿಕಾರಗಳು.–** ಈ ಕೆಳಕಂಡ ವಿಷಯಗಳಿಗೆ ಸಂಬಂಧಪಟ್ಟಂತೆ ದಾವೆಯ ಅಧಿವಿಚಾರಣೆ ನಡೆಸುವಾಗ, ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಸಕ್ಷಮ ಅಧಿಕಾರಿಯು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (ಕೇಂದ್ರ ಅಧಿನಿಯಮ 1908ರ (5) ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ಯಾವ ಅಧಿಕಾರಗಳು ನಿಹಿತವಾಗಿವೆಯೋ ಅಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಯಾರೇ ವ್ಯಕ್ತಿಯನ್ನು ಸಮನ್ ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳ ಶೋಧನೆಯನ್ನು ಮತ್ತು ಅವುಗಳ ಹಾಜರುಪಡಿಸುವಿಕೆಯನ್ನು ಅಗತ್ಯಪಡಿಸುವುದು;

(ಸಿ) ನಿಯಮಿಸಬಹುದಾದ ಯಾವುದೇ ಇತರ ವಿಷಯ.

**10. ಅಪೀಲುಗಳು.–** (1) 5ನೇ ಪ್ರಕರಣದ ಅಥವಾ 7ನೇ ಪ್ರಕರಣದ ಮೇರೆಗಿನ ಯಾವುದೇ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟಂತೆ ಸಕ್ಷಮ ಪ್ರಾಧಿಕಾರಿಯು ಮಾಡಿದ ಪ್ರತಿಯೊಂದು ಆದೇಶದ ವಿರುದ್ಧ ಜಿಲ್ಲಾ ನ್ಯಾಯಾಧೀಶನಾಗಿರತಕ್ಕ ಮತ್ತು ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕ ಅಪೀಲು ಅಧಿಕಾರಿಗೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ಅಪೀಲನ್ನು, ಕೆಳಕಂಡ ರೀತಿಯಲ್ಲಿ, ಎಂದರೆ,–

(i) 5ನೇ ಪ್ರಕರಣದ ಮೇರೆಗಿನ ಆದೇಶದ ವಿರುದ್ಧ ಅಪೀಲು ಸಲ್ಲಿಸಿದ್ದರೆ, ಆ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಆದೇಶದ ಪ್ರತಿಯನ್ನ ಅಂಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ; ಮತ್ತು

(ii) 7ನೇ ಪ್ರಕರಣದ ಮೇರೆಗಿನ ಆದೇಶದ ವಿರುದ್ಧ ಅಪೀಲು ಸಲ್ಲಿಸಿದ್ದರೆ, ಅಪೀಲುದಾರನಿಗೆ ಆದೇಶದ ಬಗ್ಗೆ ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ

– ಸಲ್ಲಿಸತಕ್ಕದ್ದು:

ಪರಂತು, ಅಪೀಲುದಾರನಿಗೆ ಸಾಕಷ್ಟು ಕಾರಣಗಳಿಂದಾಗಿ ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಆಗಿರಲಿಲ್ಲವೆಂದು ಅಪೀಲು ಅಧಿಕಾರಿಗೆ ಮನದಟ್ಟಾದರೆ, ಅವನು ಸದರಿ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಅಪೀಲನ್ನು ಸ್ವೀಕರಿಸಬಹುದು.

(3) ಸಕ್ಷಮ ಅಧಿಕಾರಿಯ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಿದ್ದರೆ, ಅಪೀಲು ಅಧಿಕಾರಿಯು, ತಾನು ಸೂಕ್ತವೆಂದು ಭಾವಿಸುವಂಥ ಅವಧಿಯವರೆಗೆ ಮತ್ತು ಅಂಥ ಷರತ್ತುಗಳ ಮೇಲೆ ಆ ಆದೇಶದ ಜಾರಿಯನ್ನು ತಡೆಹಿಡಿಯಬಹುದು.

(4) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಅಪೀಲು ಅಧಿಕಾರಿಯು ಸಾಧ್ಯವಾದಷ್ಟು ಬೇಗನೆ ವಿಲೆ ಮಾಡತಕ್ಕದ್ದು.

(5) ಈ ಪ್ರಕರಣದ ಮೇರೆಗಿನ ಯಾವುದೇ ಅಪೀಲಿನ ಖರ್ಚುಗಳು ಅಪೀಲು ಅಧಿಕಾರಿಯ ವಿವೇಚನೆಗೊಳಪಟ್ಟಿರತಕ್ಕದ್ದು.

**11. ಆದೇಶಗಳ ಅಂತಿಮತೆ.–** ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಮೇರೆಗೆ ಸಕ್ಷಮ ಅಧಿಕಾರಿಯು ಅಥವಾ ಅಪೀಲು ಅಧಿಕಾರಿಯು ಮಾಡಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ಮೂಲ ದಾವೆಯಲ್ಲಿ, ಅರ್ಜಿಯಲ್ಲಿ ಅಥವಾ ಅಮಲ್ಜಾರಿ ವ್ಯವಹರಣೆಯಲ್ಲಿ ಪ್ರಶ್ನಿಸತಕ್ಕದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರಕ್ಕೆ ಅನುಸಾರವಾಗಿ ಕೈಗೊಂಡ ಅಥವಾ ಕೈಗೊಳ್ಳಬೇಕಾದ ಯಾವುವೇ ಕ್ರಮದ ಸಂಬಂಧದಲ್ಲಿ ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ನೀಡತಕ್ಕದ್ದಲ್ಲ.

**12. ಅಪರಾಧಗಳು ಮತ್ತು ದಂಡನೆ.–** (1) ಈ ಅಧಿನಿಯಮದ ಮೇರೆಗೆ ಯಾವುವೇ ಸಾರ್ವಜನಿಕ ಆವರಣಗಳಿಂದ ಹೊರಹಾಕಲಾಗಿದ್ದ ಯಾರೇ ವ್ಯಕ್ತಿಯು, ಹಾಗೆ ಅಧಿಭೋಗದಲ್ಲಿರಲು ಅಧಿಕಾರವಿಲ್ಲದೆ ಆ ಆವರಣಗಳನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಂಡರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸುವ ಯಾರೇ ಮ್ಯಾಜಿಸ್ಟ್ರೇಟನು, ಆ ವ್ಯಕ್ತಿಯನ್ನು ಕ್ಷಿಪ್ರವಾಗಿ ಹೊರಹಾಕುವಂತೆ ಆದೇಶವನ್ನು ಮಾಡಬಹುದು ಮತ್ತು ಈ ಅಧಿನಿಯಮದ ಮೇರೆಗೆ ಅವನ ವಿರುದ್ಧ ಕೈಗೊಳ್ಳಬಹುದಾದಂತಹ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ ಹಾಗೆ ಹೊರಹಾಕಿಸಿಕೊಳ್ಳಲು ಆ ವ್ಯಕ್ತಿಯು ಬದ್ಧನಾಗಿರತಕ್ಕದ್ದು.

**13. ಮಾಹಿತಿಯನ್ನು ಪಡೆಯಲು ಅಧಿಕಾರ.–** ಯಾರೇ ವ್ಯಕ್ತಿಯು ಅಥವಾ ವ್ಯಕ್ತಿಗಳು ಯಾವುವೇ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಲ್ಲಿರುವರೆಂದು ನಿಯಮಿಸಲಾದ ಅಧಿಕಾರಿಗೆ ನಂಬಲು ಕಾರಣವಿದ್ದರೆ, ಆ ಅಧಿಕಾರಿಯು ಅಥವಾ ಅವನಿಂದ ಈ ಬಗ್ಗೆ ಅಧಿಕಾರ ಪಡೆದ ಯಾವನೇ ಇತರ ಅಧಿಕಾರಿಯು ಆ ವ್ಯಕ್ತಿಗಳನ್ನು ಅಥವಾ ಯಾರೇ ಇತರ ವ್ಯಕ್ತಿಯನ್ನು ಆ ಸಾರ್ವಜನಿಕ ಆವರಣದ ಅಧಿಭೋಗದಲ್ಲಿರುವ ವ್ಯಕ್ತಿಗಳ ಹೆಸರುಗಳಿಗೆ ಮತ್ತು ಇತರ ವಿವರಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸುವಂತೆ ಅಗತ್ಯಪಡಿಸಬಹುದು ಮತ್ತು ಹಾಗೆ ಅಗತ್ಯಪಡಿಸಲಾದ ಪ್ರತಿಯೊಬ್ಬ ವ್ಯಕ್ತಿಯು, ತನಗೆ ಗೊತ್ತಿರುವ ಮಾಹಿತಿಯನ್ನು ಒದಗಿಸಲು ಬದ್ಧನಾಗತಕ್ಕದ್ದು.

**14. ವಾರಸುದಾರರು ಮತ್ತು ಕಾನೂನು ಸಮ್ಮತ ಪ್ರತಿನಿಧಿಗಳ ಹೊಣೆಗಾರಿಕೆ.–** (1) ಯಾವ ವ್ಯಕ್ತಿಯ ವಿರುದ್ಧ ಬಾಡಿಗೆಯ ಬಾಕಿಗಳ ನಿರ್ಧರಣೆಗಾಗಿ ಅಥವಾ ಹಾನಿಗಳ ನಿರ್ಧರಣೆಗಾಗಿ ಯಾವುದೇ ವ್ಯವಹರಣೆಯನ್ನು ಕೈಗೊಳ್ಳಬೇಕಾಗಿದೆಯೋ ಅಥವಾ ಕೈಗೊಳ್ಳಲಾಗಿದೆಯೋ ಆ ವ್ಯಕ್ತಿಯು ವ್ಯವಹರಣೆಯನ್ನು ಕೈಗೊಳ್ಳುವುದಕ್ಕೆ ಮುಂಚೆಯೇ ಅಥವಾ ಆ ವ್ಯವಹರಣೆಯು ಇತ್ಯರ್ಥದಲ್ಲಿರುವಾಗಲೇ ಮೃತನಾದರೆ, ಆ ವ್ಯಕ್ತಿಯ ವಾರಸುದಾರರ ಅಥವಾ ಕಾನೂನು ಸಮ್ಮತ ಪ್ರತಿನಿಧಿಯ ವಿರುದ್ಧ ಸಂದರ್ಭಾನುಸಾರ ವ್ಯವಹರಣೆಯನ್ನು ಕೈಗೊಳ್ಳಬಹುದು ಅಥವಾ ಮುಂದುವರೆಸಬಹುದು.

(2) ಯಾರೇ ವ್ಯಕ್ತಿಯು, ಬಾಡಿಗೆಯ ಬಾಕಿಯ ರೂಪದಲ್ಲಾಗಲಿ ಅಥವಾ ಹಾನಿಯ ರೂಪದಲ್ಲಾಗಲಿ ಅಥವಾ ವೆಚ್ಚದ ರೂಪದಲ್ಲಾಗಲಿ ರಾಜ್ಯ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ನಿಗಮಿತ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಯಾವುದೇ ಮೊಬಲಗನ್ನು, ಆ ವ್ಯಕ್ತಿಯ ಮರಣಾನಂತರ ಅವನ

ವಾರಸುದಾರರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳು ಸಂದಾಯ ಮಾಡತಕ್ಕದ್ದು. ಆದರೆ, ಅವರ ಹೊಣೆಗಾರಿಕೆಯು ಮೃತನ ಆಸ್ತಿಯ ಪೈಕಿ ಅವರ ವಶದಲ್ಲಿರುವಷ್ಟು ಆಸ್ತಿಯ ಮಟ್ಟಿಗೆ ಸೀಮಿತವಾಗಿರತಕ್ಕದ್ದು.

**15. ಬಾಡಿಗೆ, ಇತ್ಯಾದಿಗಳನ್ನು ಭೂಕಂದಾಯದ ಬಾಕಿಯಂತೆ ವಸೂಲಿ ಮಾಡುವುದು.–** ಯಾರೇ ವ್ಯಕ್ತಿಯು, 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾಗಿರುವ ಬಾಡಿಗೆಯ ಬಾಕಿಯನ್ನು ಅಥವಾ ಆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾಗಿರುವ ಹಾನಿ ಪರಿಹಾರವನ್ನು ಅಥವಾ 10ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ನಿಗಮಿತ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾದ ನಿರ್ಣೀತ ವೆಚ್ಚವನ್ನು ಅಥವಾ ಅಂತಹ ಬಾಡಿಗೆಯ, ಹಾನಿ ಪರಿಹಾರದ ಅಥವಾ ವೆಚ್ಚದ ಯಾವುದೇ ಭಾಗದ ಸಂದಾಯಕ್ಕೆ ಸಂಬಂಧಿಸಿದ ಆದೇಶದಲ್ಲಿ ಅದಕ್ಕೆ ನಿರ್ದಿಷ್ಟಪಡಿಸಿದ ಕಾಲ ಯಾವುದಾದರೂ ಇದ್ದರೆ ಆ ಕಾಲದೊಳಗಾಗಿ ಸಂದಾಯ ಮಾಡಲು ನಿರಾಕರಿಸಿದರೆ ಅಥವಾ ತಪ್ಪಿದರೆ, ಸಕ್ಷಮ ಅಧಿಕಾರಿಯು ಬಾಕಿ ಇರುವ ಮೊಬಲಗಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ಡೆಪ್ಯೂಟಿ ಕಮೀಷನರ್‌ಗೆ ನೀಡಬಹುದು ಮತ್ತು ಆ ಡೆಪ್ಯೂಟಿ ಕಮೀಷನರು ಅದನ್ನು ಭೂಕಂದಾಯದ ಬಾಕಿಯಂತೆ ವಸೂಲಿ ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

**16. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.–** ಯಾವುದೇ ನ್ಯಾಯಾಲಯವು, ಯಾವುದೇ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಲ್ಲಿರುವ ಯಾರೇ ವ್ಯಕ್ತಿಯನ್ನು ಹೊರಹಾಕುವುದಕ್ಕೆ ಅಥವಾ 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಬಾಡಿಗೆಯ ಬಾಕಿಯ ಅಥವಾ ಆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಹಾನಿ ಪರಿಹಾರದ ಅಥವಾ 10ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ನಿಗಮಿತ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾಗಿರುವ ನಿರ್ಣೀತ ಖರ್ಚುಗಳ ಅಥವಾ ಅಂತಹ ಬಾಡಿಗೆಯ, ಹಾನಿ ಪರಿಹಾರಗಳ ಅಥವಾ ಖರ್ಚುಗಳ ಯಾವುದೇ ಭಾಗದ ವಸೂಲಿಗೆ ಸಂಬಂಧಿಸಿದಂತೆ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಸ್ವೀಕರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**17. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುವೇ ನಿಯಮಗಳ ಅಥವಾ ಆದೇಶಗಳ ಅನುಸಾರ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಥವಾ ನಿಗಮಿತ ಪ್ರಾಧಿಕಾರದ ಅಥವಾ ಅಪೀಲು ಅಧಿಕಾರಿಯ ಅಥವಾ ಸಕ್ಷಮ ಪ್ರಾಧಿಕಾರಿಯ ವಿರುದ್ಧ, ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**18. ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆ ಹೊರಡಿಸಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂತಹ ನಿಯಮಗಳು ಈ ಕೆಳಕಂಡ ಎಲ್ಲ ವಿಷಯಗಳ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಈ ಅಧಿನಿಯಮದ ಮೇರೆಗೆ ಕೊಡಬೇಕೆಂದು ಅಗತ್ಯಪಡಿಸಲಾದ ಅಥವಾ ಅಧಿಕೃತಗೊಳಿಸಲಾದ ಯಾವುದೇ ನೋಟೀಸಿನ ನಮೂನೆ ಮತ್ತು ಅದನ್ನು ಜಾರಿಗೊಳಿಸಬಹುದಾದ ರೀತಿ;

(ಬಿ) ಈ ಅಧಿನಿಯಮದ ಮೇರೆಗೆ ವಿಚಾರಣೆಗಳನ್ನು ನಡೆಸುವುದು;

(ಸಿ) ಸಾರ್ವಜನಿಕ ಆವರಣಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ;

(ಡಿ) ಅನಧಿಕೃತ ಅಧಿಭೋಗಕ್ಕೆ ಸಂಬಂಧಿಸಿದ ಹಾನಿ ಪರಿಹಾರವನ್ನು ನಿರ್ಧರಿಸಬಹುದಾದ ರೀತಿ ಮತ್ತು ಹಾಗೆ ನಿರ್ಧರಿಸುವಾಗ ಗಣನೆಗೆ ತೆಗೆದುಕೊಳ್ಳಬಹುದಾದ ತತ್ವಗಳು;

(ಇ) ಅಪೀಲುಗಳನ್ನು ಸಲ್ಲಿಸಬಹುದಾದ ರೀತಿ ಮತ್ತು ಅಪೀಲುಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ;

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**19. ನಿರಸನ ಮತ್ತು ಉಳಿಸುವಿಕೆಗಳು.–** ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1961 (ಕರ್ನಾಟಕ ಅಧಿನಿಯಮ 1962ರ 3) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899 (ಕರ್ನಾಟಕ ಅಧಿನಿಯಮ 1899ರ III)ರ 6ನೇ ಪ್ರಕರಣದ ಉಪಬಂಧಗಳು ಸದರಿ ಅಧಿನಿಯಮಿತಿಯನ್ನು ನಿರಸನಗೊಳಿಸುವುದಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು ಈ ಅಧಿನಿಯಮಿತಿಯನ್ನು ನಿರಸನಗೊಳಿಸಿ ಈ ಅಧಿನಿಯಮದ ಮೂಲಕ ಪುನಃ ಅಧಿನಿಯಮಿತಿಗೊಳಿಸಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಎಂ.ಎಲ್. ರಾಮಸ್ವಾಮಿ,
ಪ್ರಾರೂಪಣಕಾರರು ಮತ್ತು ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

**ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ನಿಯಮಗಳು, 1980**

**ನಿಯಮಗಳ ಅನುಕ್ರಮಣಿಕೆ**

**ನಿಯಮಗಳು:**

1. ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ನೋಟೀಸುಗಳು ಮತ್ತು ಆದೇಶಗಳ ನಮೂನೆ
4. ನೋಟೀಸುಗಳನ್ನು ಮತ್ತು ಆದೇಶಗಳನ್ನು ಜಾರಿಮಾಡುವ ರೀತಿ
5. ವಿಚಾರಣೆಗಳನ್ನು ನಡೆಸುವುದು
6. ಸಾರ್ವಜನಿಕ ಆವರಣವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ರೀತಿ
7. ಹಾನಿ ಪರಿಹಾರ ನಿರ್ಧಾರಣೆ
8. ಅಪೀಲುಗಳಲ್ಲಿನ ಕಾರ್ಯವಿಧಾನ
9. 13ನೇ ಪ್ರಕರಣದ ಮೇರೆಗೆ ನಿಯಮಿಸಲಾದ ಅಧಿಕಾರಿ
10. ನಮೂನೆಗಳು 'ಎ' ದಿಂದ 'ಎಫ್'ವರೆಗೆ

# [1][ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ನಿಯಮಗಳು, 1980][1]

1. ಕರ್ನಾಟಕ ರಾಜ್ಯಪತ್ರ ಭಾಗ iv 2ಸಿ (ii), ದಿನಾಂಕ 11-12-1980ರಲ್ಲಿ ಪ್ರಕಟಿಸಲಾಗಿದೆ.

ಅಧಿಸೂಚನೆ ಸಂಖ್ಯೆ ಆರ್‌ಡಿ 476 ಜಿಎಚ್‌ಆರ್ 78, ಬೆಂಗಳೂರು, ದಿನಾಂಕ 21ನೇ ನವೆಂಬರ್, 1980

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974 (ಕರ್ನಾಟಕ ಅಧಿನಿಯಮ 1974ರ 32)ರ 18ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

**1. ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ನಿಯಮಗಳು, 1980 ಎಂದು ಕರೆಯತಕ್ಕದ್ದು.

(2) ಅವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(i) "ಅಧಿನಿಯಮ" ಎಂದರೆ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974;

(ii) "ನಮೂನೆ" ಎಂದರೆ ಈ ನಿಯಮಗಳಿಗೆ ಲಗತ್ತಿಸಿರುವ ನಮೂನೆ;

(iii) "ಪ್ರಕರಣ" ಎಂದರೆ ಈ ಅಧಿನಿಯಮದ ಪ್ರಕರಣ.

(2) ಈ ನಿಯಮಗಳಲ್ಲಿ ಬಳಸಿರುವ, ಆದರೆ ಪರಿಭಾಷಿಸಿಲ್ಲದ ಪದಗಳು ಮತ್ತು ಪದಾವಳಿಗಳು, ಅವುಗಳಿಗೆ ಅಧಿನಿಯಮದಲ್ಲಿ ಯಾವುದಾದರೂ ಅರ್ಥವನ್ನು ಕೊಟ್ಟಿದ್ದರೆ, ಅವೇ ಅರ್ಥಗಳನ್ನು ಹೊಂದಿರತಕ್ಕದ್ದು.

**3. ನೋಟೀಸುಗಳು ಮತ್ತು ಆದೇಶಗಳ ನಮೂನೆ.-** (1) 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ನೋಟೀಸು 'ಎ' ನಮೂನೆಯಲ್ಲಿರತಕ್ಕದ್ದು ಮತ್ತು ಆದೇಶವು 'ಬಿ' ನಮೂನೆಯಲ್ಲಿರತಕ್ಕದ್ದು.

(2) 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ನೋಟೀಸು 'ಸಿ' ನಮೂನೆಯಲ್ಲಿರತಕ್ಕದ್ದು.

(3) 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಆದೇಶವು 'ಡಿ' ನಮೂನೆಯಲ್ಲಿರತಕ್ಕದ್ದು.

(4) 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ನೋಟೀಸು 'ಇ' ನಮೂನೆಯಲ್ಲಿರತಕ್ಕದ್ದು.

(5) 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಆದೇಶವು "ಎಫ್" ನಮೂನೆಯಲ್ಲಿರತಕ್ಕದ್ದು.

**4. ನೋಟೀಸುಗಳನ್ನು ಮತ್ತು ಆದೇಶಗಳನ್ನು ಜಾರಿ ಮಾಡುವ ರೀತಿ.-** (1) ಈ ಅಧಿನಿಯಮದ 4ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಬೇಕಾಗಿದೆಯೋ ಆ ವ್ಯಕ್ತಿಯು ಸಿಗದಿದ್ದರೆ, ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಇತರ ರೀತಿಯಲ್ಲಿ ನೋಟೀಸನ್ನು ಜಾರಿಗೊಳಿಸುವ ಜೊತೆಗೆ, ಅಂಥ ನೋಟೀಸಿನ ಒಂದು ಪ್ರತಿಯನ್ನು ಅಂಥ ವ್ಯಕ್ತಿಯು ಕೊನೆಯದಾಗಿ ವ್ಯವಹಾರ ನಡೆಸಿದನೆಂದು ತಿಳಿದುಬಂದ ಸ್ಥಳದ ಎದ್ದುಕಾಣುವ ಭಾಗಗಳಲ್ಲಿ ಅಂಟಿಸತಕ್ಕದ್ದು ಅಥವಾ ಅವನ ಕುಟುಂಬದ ವಯಸ್ಕ ಸದಸ್ಯನಿಗೆ ಕೊಡತಕ್ಕದ್ದು.

(2) ಸಕ್ಷಮ ಅಧಿಕಾರಿಯು ಯಾವುದೇ ನೋಟೀಸಿನ ಒಳಾಂಶಗಳನ್ನು ಆ ಸ್ಥಳಗಳಲ್ಲಿ ಡಂಗೂರ ಹೊಡೆಸುವ ಮೂಲಕ ಸಹ ಸಾರಬಹುದು.

**5. ವಿಚಾರಣೆಗಳನ್ನು ನಡೆಸುವುದು.–** (1) ಯಾವ ವ್ಯಕ್ತಿಗೆ ಈ ಅಧಿನಿಯಮದ ಮೇರೆಗೆ ನೋಟೀಸನ್ನು ಅಥವಾ ಆದೇಶವನ್ನು ಜಾರಿ ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯು, ತನ್ನ ಪ್ರತಿನಿಧಿಯ ಮೂಲಕ ಅಹವಾಲು ಹೇಳಿಕೊಳ್ಳಲು ಇಚ್ಛಿಸಿದರೆ, ಅವನು ಅಂಥ ಪ್ರತಿನಿಧಿಗೆ ಬರಹದಲ್ಲಿ ಅಧಿಕಾರ ನೀಡತಕ್ಕದ್ದು.

(2) ಸಕ್ಷಮ ಅಧಿಕಾರಿಯು, ಸಾಕ್ಷ್ಯದ ಸಾರಾಂಶವನ್ನು ದಾಖಲು ಮಾಡತಕ್ಕದ್ದು ಮತ್ತು ಅವನ ಮುಂದೆ ದಾಖಲ್ಮಾಡಿದ ಯಾವುವೇ ಸುಸಂಗತ ದಸ್ತಾವೇಜುಗಳು, ವ್ಯವಹರಣೆಗಳ ದಾಖಲೆಗಳ ಒಂದು ಭಾಗವಾಗತಕ್ಕದ್ದು.

**6. ಸಾರ್ವಜನಿಕ ಆವರಣವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ರೀತಿ.–** (1) ಈ ಅಧಿನಿಯಮದ ಮೇರೆಗೆ ಯಾವುದೇ ಸಾರ್ವಜನಿಕ ಆವರಣಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವಾಗ ಯಾವುದೇ ಅಡಚಣೆ ಉಂಟುಮಾಡಿದರೆ ಅಥವಾ ಅಡಚಣೆ ಉಂಟುಮಾಡುವ ಸಂಭವವಿದೆಯೆಂದು ಸಕ್ಷಮ ಅಧಿಕಾರಿಯು ಅಭಿಪ್ರಾಯಪಟ್ಟರೆ, ಆ ಸಕ್ಷಮ ಅಧಿಕಾರಿಯು ಅಥವಾ ಈ ಬಗ್ಗೆ ಅವನಿಂದ ಯುಕ್ತವಾಗಿ ಅಧಿಕಾರ ಪಡೆದ ಇತರ ಯಾರೇ ಅಧಿಕಾರಿಯು ಅಗತ್ಯವಾದ ಪೊಲೀಸು ನೆರವನ್ನು ಪಡೆದುಕೊಳ್ಳಬಹುದು.

(2) ಈ ಅಧಿನಿಯಮದ ಮೇರೆಗೆ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾಗಿರುವ ಯಾವುದೇ ಸಾರ್ವಜನಿಕ ಆವರಣಕ್ಕೆ ಬೀಗ ಹಾಕಿರುವುದು ಕಂಡುಬಂದರೆ, ಸಕ್ಷಮ ಅಧಿಕಾರಿಯು ಅಥವಾ ಈ ಬಗ್ಗೆ ಅವನಿಂದ ಯುಕ್ತವಾಗಿ ಅಧಿಕಾರ ಪಡೆದ ಇತರ ಯಾವನೇ ಅಧಿಕಾರಿಯು ಆ ಆವರಣವನ್ನು ಮೊಹರುಬಂದ್ ಮಾಡಬಹುದು ಅಥವಾ ಮೂವರು ಸಾಕ್ಷಿಗಳ ಸಮಕ್ಷಮದಲ್ಲಿ ಆ ಬೀಗಗಳನ್ನು ಮುರಿದು ತೆಗೆಯಬಹುದು ಅಥವಾ ಯಾವುದೇ ಬಾಗಿಲನ್ನು, ಗೇಟನ್ನು ಅಥವಾ ಇತರ ಅಡ್ಡಿಯನ್ನು ತೆರೆಯಬಹುದು ಅಥವಾ ತೆರೆಯುವಂತೆ ಮಾಡಬಹುದು ಮತ್ತು ಆ ಆವರಣವನ್ನು ಪ್ರವೇಶಿಸಬಹುದು:

ಪರಂತು,

(1) ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತದ ತರುವಾಯ ಸಾರ್ವಜನಿಕ ಆವರಣದೊಳಕ್ಕೆ ಪ್ರವೇಶಿಸತಕ್ಕದ್ದಲ್ಲ ಅಥವಾ ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಯಾವುದೇ ಸಾರ್ವಜನಿಕ ಆವರಣವನ್ನು ಬಲವಂತವಾಗಿ ತೆರೆಸಿದ್ದರೆ, ಕೂಡಲೇ, ಆ ಆವರಣದಲ್ಲಿ ಕಂಡುಬಂದ ವಸ್ತುಗಳ ವಿವರಣಾ ಪಟ್ಟಿಯನ್ನು ಇಬ್ಬರು ಸಾಕ್ಷಿಗಳ ಸಮ್ಮುಖದಲ್ಲಿ ಸಿದ್ಧಪಡಿಸತಕ್ಕದ್ದು.

(3) 6ನೇ ನಿಯಮದ (1) ಮತ್ತು (2) ನೇ ಉಪನಿಯಮಗಳ ಮೇರೆಗೆ ಸ್ವಾಧೀನಕ್ಕೆ ತೆಗೆದುಕೊಂಡ ಆವರಣಗಳಲ್ಲಿ ಯಾವುದೇ ಸ್ವತ್ತು ಇದ್ದರೆ, ಅದನ್ನು ಸಕ್ಷಮ ಅಧಿಕಾರಿಯ ಅಥವಾ ಈ ಬಗ್ಗೆ ಅವನಿಂದ ಯುಕ್ತವಾಗಿ ಅಧಿಕಾರ ಪಡೆದ ಇತರ ಯಾವನೇ ಅಧಿಕಾರಿಯ ಅಭಿರಕ್ಷೆಯಲ್ಲಿ ಇಡತಕ್ಕದ್ದು ಮತ್ತು ತಾನು ಅವಶ್ಯವೆಂದು ಭಾವಿಸಬಹುದಾದಂತೆ ಯುಕ್ತ ಪ್ರಕಟಣೆಯನ್ನು ನೀಡಿದ ತರುವಾಯ, ಅದನ್ನು ವಿಲೆ ಮಾಡತಕ್ಕದ್ದು.

**7. ಹಾನಿ ಪರಿಹಾರ ನಿರ್ಧಾರಣೆ.–** ಯಾವುದೇ ಸಾರ್ವಜನಿಕ ಆವರಣದ ಅನಧಿಕೃತ ಬಳಕೆಗಾಗಿ ಅಥವಾ ಅಧಿಭೋಗಕ್ಕಾಗಿ ಹಾನಿ ಪರಿಹಾರವನ್ನು ನಿರ್ಧಾರಣೆ ಮಾಡುವಾಗ, ಸಕ್ಷಮ ಅಧಿಕಾರಿಯು ಈ ಕೆಳಕಂಡ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು, ಎಂದರೆ:–

(ಎ) ಸಾರ್ವಜನಿಕ ಆವರಣವು ಯಾವ ಉದ್ದೇಶಕ್ಕಾಗಿ ಮತ್ತು ಎಷ್ಟು ಅವಧಿಯವರೆಗೆ ಅನಧಿಕೃತ ಅಧಿಭೋಗದಲ್ಲಿದ್ದಿತೋ ಆ ಉದ್ದೇಶ ಮತ್ತು ಅವಧಿ;

(ಬಿ) ಅಂಥ ಆವರಣದಲ್ಲಿ ಲಭ್ಯವಿರುವ ಸ್ಥಳಾವಕಾಶದ ಸ್ವರೂಪ, ಗಾತ್ರ ಮತ್ತು ಗುಣಮಟ್ಟ;

(ಸಿ) ಆವರಣವನ್ನು ಅನಧಿಕೃತ ಅಧಿಭೋಗದ ಅವಧಿಯಲ್ಲಿ ಖಾಸಗಿ ವ್ಯಕ್ತಿಯೊಬ್ಬನಿಗೆ ಬಾಡಿಗೆಗೆ ನೀಡಿದಿದ್ದರೆ ವಸೂಲಿಯಾಗಬಹುದಾಗಿದ್ದ ಬಾಡಿಗೆ;

(ಡಿ) ಲೋಕೋಪಯೋಗಿ ಇಲಾಖೆಯು ನಿಶ್ಚಿತಪಡಿಸಿದಂತೆ ಅನಧಿಕೃತ ಅಧಿಭೋಗದ ಅವಧಿಯಲ್ಲಿ ಆವರಣಕ್ಕೆ ಆಗಿರುವ ವಾಸ್ತವಿಕ ಹಾನಿ;

(ಇ) ಹಾನಿ ಪರಿಹಾರವನ್ನು ನಿರ್ಧಾರಣೆ ಮಾಡುವ ಉದ್ದೇಶಕ್ಕಾಗಿ ಸಂಬಂಧಪಟ್ಟ ಯಾವುದೇ ಇತರ ವಿಷಯ.

**8. ಅಪೀಲುಗಳಲ್ಲಿನ ಕಾರ್ಯವಿಧಾನ.–** (1) ಈ ಅಧಿನಿಯಮದ 10ನೇ ಪ್ರಕರಣದ ಮೇರೆಗೆ ಸಲ್ಲಿಸುವ ಅಪೀಲು ಬರಹ ರೂಪದಲ್ಲಿರತಕ್ಕದ್ದು ಮತ್ತು ಅದರಲ್ಲಿ ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗುತ್ತಿದೆಯೋ ಆ ಆದೇಶದ ಬಗ್ಗೆ ಆಕ್ಷೇಪದ ಕಾರಣಗಳನ್ನು ಸಂಕ್ಷಿಪ್ತವಾಗಿ ನಿರೂಪಿಸತಕ್ಕದ್ದು ಮತ್ತು ಅದಕ್ಕೆ ಅಂತಹ ಆದೇಶದ ಒಂದು ಪ್ರತಿಯನ್ನು ಲಗತ್ತಿಸಿರತಕ್ಕದ್ದು.

(2) ಅಪೀಲನ್ನು ಸ್ವೀಕರಿಸಿದ ಮೇಲೆ ಮತ್ತು ಸಕ್ಷಮ ಅಧಿಕಾರಿಯ ಮುಂದಿರತಕ್ಕ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಂಡು ಅವುಗಳನ್ನು ಪರಿಶೀಲಿಸಿದ ತರುವಾಯ, ಅಪೀಲು ಅಧಿಕಾರಿಯು ಆ ಅಪೀಲಿನ ವಿಚಾರಣೆಗೆ ಸ್ಥಳ ಮತ್ತು ಸಮಯವನ್ನು ಗೊತ್ತುಪಡಿಸತಕ್ಕದ್ದು ಮತ್ತು ಯಾರ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಸಕ್ಷಮ ಅಧಿಕಾರಿಗೆ ಮತ್ತು ಅಪೀಲುದಾರನಿಗೆ ಅದರ ಬಗ್ಗೆ ನೋಟೀಸನ್ನು ನೀಡತಕ್ಕದ್ದು.

**9. 13ನೇ ಪ್ರಕರಣದ ಮೇರೆಗೆ ನಿಯಮಿಸಲಾದ ಅಧಿಕಾರಿ.–** ಈ ಅಧಿನಿಯಮದ ಉದ್ದೇಶಕ್ಕಾಗಿ ಈ ಕೆಳಕಂಡವರು ಸಕ್ಷಮ ಅಧಿಕಾರಿಗಳಾಗಿರತಕ್ಕದ್ದು, ಎಂದರೆ:–

1. ರಾಜ್ಯ ಸರ್ಕಾರಕ್ಕೆ ಸೇರಿದ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟಂತೆ–ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್.

2. ಪುರಸಭೆಗಳಿಗೆ ಸೇರಿದ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟಂತೆ–ಪುರಸಭೆಯ ಚೀಫ್ ಆಫೀಸರ್.

3. ನಗರ ಸಭೆಗಳಿಗೆ ಸೇರಿದ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟಂತೆ–ಮುನ್ಸಿಪಲ್ ಕಮೀಷನರ್.

4. ನಗರಪಾಲಿಕೆಗೆ ಸೇರಿದ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟಂತೆ–ಕಮೀಷನರ್.

5. ರಾಜ್ಯ ಸರ್ಕಾರದ ನಿರ್ವಹಣೆಯ ಅಧೀನದಲ್ಲಿರುವ ಮುಜುರಾಯಿ ಅಥವಾ ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆಗಳಿಗೆ ಸೇರಿದ ಸಾರ್ವಜನಿಕ ಆವರಣಗಳಿಗೆ ಸಂಬಂಧಪಟ್ಟಂತೆ–ಅಂಥ ಸಂಸ್ಥೆಗಳ ಪ್ರಭಾರದಲ್ಲಿರುವ ತಹಸೀಲ್ದಾರ.

**ನಮೂನೆ 'ಎ'**

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974 ರ 4ನೇ ಪ್ರಕರಣದ (1) ನೇ ಉಪಪ್ರಕರಣದ ಮೇರೆಗಿನ ನೋಟೀಸಿನ ನಮೂನೆ.

ಶ್ರೀ/ಶ್ರೀಮತಿ/ಕುಮಾರಿ...............

.......................................... ಇವರಿಗೆ,

ಇಲ್ಲಿ ಕೆಳಗೆ ನಿರ್ದಿಷ್ಟಪಡಿಸಿರುವ ಆದಾರಗಳಿಂದ, ನೀವು ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಲ್ಲಿದ್ದೀರೆಂದು ಮತ್ತು ಸದರಿ ಆವರಣದಿಂದ ನಿಮ್ಮನ್ನು ಹೊರಹಾಕಬೇಕೆಂದು ಈ ಕೆಳಗೆ ಸಹಿ ಮಾಡಿರುವ ನಾನು ಅಭಿಪ್ರಾಯ ಪಟ್ಟಿರುವುದರಿಂದ:

**ಕಾರಣಗಳು**

ಆದುದರಿಂದ, ಈಗ, ಅಧಿನಿಯಮದ 4ನೇ ಪ್ರಕರಣದ (1)ನೇ ಉಪಪ್ರಕರಣದ ಅನುಸರಣೆವಾಗಿ, ಹೊರಹಾಕುವ ಆದೇಶವನ್ನು ಏಕೆ ಮಾಡಬಾರದು ಎಂಬ ಬಗ್ಗೆ ............* ರಂದು ಅಥವಾ ಅದಕ್ಕೂ ಮುಂಚೆ ಕಾರಣ ತೋರಿಸುವಂತೆ ನಾನು ಈ ಮೂಲಕ ತಮ್ಮನ್ನು ಕೋರುತ್ತೇನೆ.

**ಅನುಸೂಚಿ**

ದಿನಾಂಕ.........

ಸಕ್ಷಮ ಅಧಿಕಾರಿಯ ಸಹಿ ಮತ್ತು ಮೊಹರು

* ಈ ದಿನಾಂಕವು ನೋಟೀಸನ್ನು ಹೊರಡಿಸಿದ ದಿನಾಂಕದಿಂದ ಹತ್ತು ದಿನಗಳಿಗಿಂತ ಮುಂಚಿನದಲ್ಲದ ದಿನಾಂಕವಾಗಿರತಕ್ಕದ್ದು.

## ನಮೂನೆ-'ಬಿ'

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ಆದೇಶ.

ಈ ಕೆಳಗೆ ದಾಖಲು ಮಾಡಲಾಗಿರುವ ಆಧಾರಗಳಿಂದಾಗಿ, ಶ್ರೀ/ಶ್ರೀಮತಿ/ಕುಮಾರಿ........... ಎಂಬುವನು / ಎಂಬುವಳು ಈ ಕೆಳಗೆ ನಿರ್ದಿಷ್ಟಪಡಿಸಿರುವ ಸಾರ್ವಜನಿಕ ಆವರಣದ ಅನಧಿಕೃತ ಅಧಿಭೋಗದಲ್ಲಿರುವನೆಂದು / ಇರುವಳೆಂದು / ಈ ಕೆಳಗೆ ಸಹಿ ಮಾಡಿರುವ ನನಗೆ ಮನದಟ್ಟಾಗಿರುವುದರಿಂದ:

### ಆಧಾರಗಳು

ಆದ್ದರಿಂದ ಈಗ, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ ಆವರಣದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಅಧಿಭೋಗದಲ್ಲಿರಬಹುದಾದ ಸದರಿ ಶ್ರೀ/ಶ್ರೀಮತಿ/ಕುಮಾರಿ........................................................... ಇವರು ಮತ್ತು ಎಲ್ಲ ವ್ಯಕ್ತಿಗಳು ಈ ಆದೇಶವನ್ನು ಪ್ರಕಟಿಸಿದ ದಿನಾಂಕದಿಂದ ನಲವತ್ತೈದು ದಿನಗಳೊಳಗಾಗಿ ಸದರಿ ಆವರಣವನ್ನು ಖಾಲಿ ಮಾಡಬೇಕೆಂದು ನಾನು ಈ ಮೂಲಕ ಆದೇಶ ಮಾಡಿದ್ದೇನೆ. ಇಲ್ಲಿ ಮೇಲೆ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಈ ಆದೇಶವನ್ನು ಪಾಲಿಸಲು ನಿರಾಕರಿಸಿದ ಅಥವಾ ತಪ್ಪಿದ ಸಂದರ್ಭದಲ್ಲಿ ಸದರಿ ಶ್ರೀ/ಶ್ರೀಮತಿ/ಕುಮಾರಿ............................ ಮತ್ತು ಸಂಬಂಧಪಟ್ಟ ಇತರ ಎಲ್ಲ ವ್ಯಕ್ತಿಗಳು ಸದರಿ ಆವರಣದಿಂದ ಹೊರಹಾಕುವಿಕೆಗೆ ಅಗತ್ಯವಾದರೆ, ಅವಶ್ಯವಾಗಬಹುದಾದಂಥ ಬಲ ಪ್ರಯೋಗದ ಮೂಲಕ ಹೊರಹಾಕುವಿಕೆಗೆ ಗುರಿಯಾಗತಕ್ಕದ್ದು.

### ಅನುಸೂಚಿ

ದಿನಾಂಕ..........

ಸಕ್ಷಮ ಅಧಿಕಾರಿಯ ಸಹಿ
ಮೊಹರು

## ನಮೂನೆ 'ಸಿ'

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ 6ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ನೋಟೀಸಿನ ನಮೂನೆ.

ಶ್ರೀ/ಶ್ರೀಮತಿ/ಕುಮಾರಿ.....................

.................................. ಅವರಿಗೆ

ತಾವು ಅನಧಿಕೃತವಾಗಿ ಅಧಿಭೋಗಿಸುತ್ತಿದ್ದ, ಈ ಕೆಳಗಿನ ಅನುಸೂಚಿಯಲ್ಲಿ ವಿವರಿಸಿದ ಸಾರ್ವಜನಿಕ ಆವರಣದಿಂದ ತಮ್ಮನ್ನು................................ ರಂದು ಹೊರಹಾಕಿರುವುದರಿಂದ:

ಸದರಿ ಅಧಿನಿಯಮದ 6ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ನಾನು ಈ ಮೂಲಕ ತಮಗೆ, ಸದರಿ ಆವರಣದಲ್ಲಿ ಉಳಿದಿರುವ ಯಾವುದೇ ಸ್ವತ್ತು, ಈ ನೋಟಿಸು ತಮಗೆ ಜಾರಿಯಾದ ಹದಿನಾಲ್ಕು ದಿನಗಳ ತರುವಾಯ, ತೆಗೆದುಹಾಕುವುದಕ್ಕೆ ಅಥವಾ ಸಾರ್ವಜನಿಕ ಹರಾಜಿನ ಮೂಲಕ ಅದನ್ನು ವಿಲೆ ಮಾಡಲು ಬದ್ಧವಾಗಿರುತ್ತದೆ ಎಂದು ನಾನು ಈ ಮೂಲಕ ತಿಳಿಯಪಡಿಸುತ್ತೇನೆ. ಒಂದು ವೇಳೆ ತಾವು ತಮ್ಮ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಮತ್ತು ಸದರಿ ಆವರಣದಿಂದ ಅದನ್ನು ತೆಗೆದುಹಾಕಲು ಇಚ್ಛಿಸಿದರೆ, ಈ ಕೆಳಗೆ ಸಹಿಮಾಡಿರುವ ಅಧಿಕಾರಿಯಿಂದ ಲಿಖಿತ ಅನುಮತಿ ಪಡೆದ ಮೇಲೆ, ತಮಗೆ ಹಾಗೆ ಮಾಡಲು ಅನುಮತಿ ನೀಡಲಾಗುವುದು. ಆದರೆ ಯಾವುದೇ ಬಾಡಿಗೆ/ಹಾನಿಗೆ ಸಂಬಂಧಪಟ್ಟಂತೆ ಪರಿಹಾರದ ಬಾಕಿ ನಿಮ್ಮಿಂದ ಇದ್ದರೆ ಅದನ್ನು ತಾವು ಸದರಿ ಹದಿನಾಲ್ಕು ದಿನಗಳ ಅವಧಿಯೊಳಗಾಗಿ ಸಂದಾಯ ಮಾಡಿರಬೇಕು.

**ಅನುಸೂಚಿ**

ದಿನಾಂಕ:

ಸಕ್ಷಮ ಅಧಿಕಾರಿಯ ಸಹಿ
ಮತ್ತು ಮೊಹರು

## ನಮೂನೆ 'ಡಿ'

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ 7ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಆದೇಶ.

ಶ್ರೀ/ಶ್ರೀಮತಿ/ಕುಮಾರಿ......................

.................................. ಇವರಿಗೆ,

ತಾವು ಈ ಕೆಳಗಿನ ಅನುಸೂಚಿಯಲ್ಲಿ ವಿವರಿಸಿದ ಸಾರ್ವಜನಿಕ ಆವರಣದ ಅಧಿಭೋಗದಲ್ಲಿರುವುದರಿಂದ/ಇದ್ದುದರಿಂದ:

ಮತ್ತು ಈ ಕೆಳಗಿನ ಅನುಸೂಚಿಯಲ್ಲಿ ವಿವರಿಸಿದ ಸಾರ್ವಜನಿಕ ಆವರಣಕ್ಕೆ ಸಂಬಂಧಿಸಿದಂತೆ...................................... ರೂಪಾಯಿಗಳ ಮೊತ್ತವು ಬಾಕಿ ಅಥವಾ ಬಾಡಿಗೆ ಬರಬೇಕಾಗಿರುವುದರಿಂದ;

ಮತ್ತು ಸದರಿ ಆವರಣಕ್ಕೆ ಸಂಬಂಧಿಸದಂತೆ .................. ಇಸವಿಯ ............... ತಿಂಗಳ ......... ದಿನದಿಂದ........... ಇಸವಿಯ.......... ತಿಂಗಳ................ ದಿನದವರೆಗೆ ............... ರೂಪಾಯಿ ಬಾಕಿ ಅಥವಾ ಬಾಡಿಗೆ ಬರಬೇಕಾಗಿದ್ದು ತಾವು ಅದನ್ನು ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿರುವುದರಿಂದ;

ಈಗ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ 7ನೇ ಪ್ರಕರಣದ(1)ನೇ ಉಪ-ಪ್ರಕರಣದ ಮೂಲಕ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ ಮೊತ್ತವನ್ನು ಈ ನೋಟೀಸನ್ನು ಜಾರಿಮಾಡಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ............... ರೂಪಾಯಿಗಳ ಸಮಾನ ಕಂತುಗಳಲ್ಲಿ........... ತಿಂಗಳೊಳಗೆ ಸಂದಾಯ ಮಾಡುವಂತೆ ನಾನು ಈ ಮೂಲಕ ನಿಮ್ಮನ್ನು ಅಗತ್ಯಪಡಿಸುತ್ತೇನೆ. ಒಂದು ವೇಳೆ ಸದರಿ ಮೊತ್ತವನ್ನು ಸದರಿ ಅವಧಿಯೊಳಗಾಗಿ ಅಥವಾ ಸದರಿ ರೀತಿಯಲ್ಲಿ ಸಂದಾಯ ಮಾಡದಿದ್ದರೆ ಅದನ್ನು ಭೂಕಂದಾಯ ಬಾಕಿಯಂತೆ ವಸೂಲಿ ಮಾಡಲಾಗುವುದು.

### ಅನುಸೂಚಿ

ದಿನಾಂಕ: ಸಕ್ಷಮ ಅಧಿಕಾರಿಯ ಸಹಿ
ಮತ್ತು ಮೊಹರು

* ಅಗತ್ಯವಿಲ್ಲದ ಪದಾವಳಿಗಳನ್ನು ಹೊಡೆದುಹಾಕಿ.

## ನಮೂನೆ-‘ಇ’

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ 7ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ನೋಟೀಸು.

ಶ್ರೀ/ಶ್ರೀಮತಿ/ಕುಮಾರಿ......................

................................ ಇವರಿಗೆ,

ತಾವು, ಈ ಕೆಳಗಿನ 1ನೇ ಅನುಸೂಚಿಯಲ್ಲಿ ಉಲ್ಲೇಖಿಸಿರುವ ಸಾರ್ವಜನಿಕ ಆವರಣದಲ್ಲಿ ಅನಧಿಕೃತವಾಗಿ ಅಧಿಭೋಗದಲ್ಲಿರುವರೆಂದು / ಇದ್ದಿರೆಂದು ಈ ಕೆಳಗೆ ಸಹಿ ಮಾಡಿರುವ ನನಗೆ ಮನದಟ್ಟಾಗಿರುವುದರಿಂದ,

ಮತ್ತು ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ 7ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ ಆವರಣಗಳ ಅನಧಿಕೃತ ಬಳಕೆಯ ಮತ್ತು ಅಧಿಭೋಗದ ಕಾರಣದಿಂದಾಗಿ, ಸದರಿ ಅವಧಿಗಾಗಿ (ಗಳಿಗಾಗಿ) ಮತ್ತು ಈ ಕೆಳಗಿನ IIನೇ ಅನುಸೂಚಿಯಲ್ಲಿ ತೋರಿಸಿದ ದರದಲ್ಲಿ (ಗಳಲ್ಲಿ) ................ ರೂಪಾಯಿಯ ಹಾನಿ ಆಗಿದೆಯೆಂದು ನಾನು ಪರಿಗಣಿಸಿರುವುದರಿಂದ;

ಸದರಿ ಅಧಿನಿಯಮದ 7ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳ ಮೇರೆಗೆ, ಸದರಿ ಹಾನಿ ಪರಿಹಾರಗಳನ್ನು ಸಂದಾಯ ಮಾಡುವಂತೆ ತಮ್ಮನ್ನು ಅಗತ್ಯಪಡಿಸುವ ಆದೇಶವನ್ನು ಏಕೆ ಮಾಡಬಾರದು ಎಂಬ ಬಗ್ಗೆ ದಿನಾಂಕ................... ರಂದು ಅಥವಾ ಅದಕ್ಕೂ ಮುಂಚೆ ಕಾರಣ ತೋರಿಸುವಂತೆ ನಾನು ಈ ಮೂಲಕ ತಮ್ಮನ್ನು ಕೋರುತ್ತೇನೆ.

ಅನುಸೂಚಿ-I

ಅನುಸೂಚಿ-II

ದಿನಾಂಕ:

ಸಕ್ಷಮ ಅಧಿಕಾರಿಯ ಸಹಿ
ಮತ್ತು ಮೊಹರು

## ನಮೂನೆ-'ಎಫ್'

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ 7ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ಆದೇಶದ ನಮೂನೆ.

ಶ್ರೀ/ಶ್ರೀಮತಿ/ಕುಮಾರಿ......................

................................ ಇವರಿಗೆ,

ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿದ ಸಾರ್ವಜನಿಕ ಆವರಣದ ಅನಧಿಕೃತ ಅಧಿಭೋಗದಲ್ಲಿ ತಾವು ಇರುವಿರೆಂದು/ ಇದ್ದಿರೆಂದು ಈ ಕೆಳಗೆ ಸಹಿ ಮಾಡಿರುವ ನನಗೆ ಮನದಟ್ಟಾಗಿರುವುದರಿಂದ;

ಮತ್ತು ಸದರಿ ಆವರಣದ ಅನಧಿಕೃತ ಬಳಕೆಗಾಗಿ ಮತ್ತು ಉಪಯೋಗಕ್ಕಾಗಿ............. ರೂಪಾಯಿಯ ಹಾನಿ ಪರಿಹಾರವನ್ನು ಸಂದಾಯ ಮಾಡುವಂತೆ ತಮ್ಮನ್ನು ಅಗತ್ಯಪಡಿಸುವ ಆದೇಶವನ್ನು ಏಕೆ ಮಾಡಬಾರದು ಎಂಬ ಬಗ್ಗೆ.......................................... ರಂದು ಅಥವಾ ಅದಕ್ಕೂ ಮುಂಚೆ ಕಾರಣ ತೋರಿಸುವಂತೆ.....................ದಿನಾಂಕದ ಲಿಖಿತ ನೋಟೀಸಿನ ಮೂಲಕ ತಮ್ಮನ್ನು ಕೋರಿರುವುದರಿಂದ;

ಮತ್ತು ತಮ್ಮ ಅಪೇಕ್ಷಣೆಗಳು ಮತ್ತು / ಅಥವಾ ತಾವು ಹಾಜರುಪಡಿಸಿದ ಸಾಕ್ಷಿಗಳನ್ನು ನಾನು ಪರಿಶೀಲಿಸಿರುವುದರಿಂದ;

ಮತ್ತು ಸದರಿ ದಿನಾಂಕದೊಳಗಾಗಿ ತಾವು ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸದಿರುವುದರಿಂದ ಅಥವಾ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸದಿರುವುದರಿಂದ;

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ರ 7ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ನನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ ಆವರಣಗಳನ್ನು ತಾವು ಅನಧಿಕೃತವಾಗಿ ಅಧಿಭೋಗದಲ್ಲಿರಿಸಿಕೊಂಡಿದ್ದ ಕಾರಣದಿಂದಾಗಿ.................. ರೂಪಾಯಿಗಳನ್ನು ಸಂದಾಯ ಮಾಡಬೇಕೆಂದು ನಾನು ನಿರ್ಧಾರ ಮಾಡಿದ್ದು ಅದನ್ನು.................................................. ತಿಂಗಳೊಳಗೆ.......................................... ಸಮ ಕಂತುಗಳಲ್ಲಿ ಸಂದಾಯ ಮಾಡಬೇಕೆಂದು ನಾನು ಈಗ ಈ ಮೂಲಕ ಆದೇಶಿಸುತ್ತೇನೆ.

ಸದರಿ ಅವಧಿಯೊಳಗಾಗಿ ಅಥವಾ ಮೇಲೆ ಹೇಳಿದ ರೀತಿಯಲ್ಲಿ ಹಾನಿ ಪರಿಹಾರವನ್ನು ಅಥವಾ ಅದರ ಯಾವುದೇ ಕಂತನ್ನು ಸಂದಾಯ ಮಾಡಲು ತಾವು ನಿರಾಕರಿಸಿದ ಅಥವಾ ತಪ್ಪಿದ ಸಂದರ್ಭದಲ್ಲಿ ಆ ಮೊಬಲಗನ್ನು ಭೂಕಂದಾಯದ ಬಾಕಿಯಂತೆ ವಸೂಲಿ ಮಾಡಲಾಗುವುದು.

**ಅನುಸೂಚಿ**

ಸಕ್ಷಮ ಅಧಿಕಾರಿಯ ಸಹಿ
ಮತ್ತು ಮೊಹರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಎ. ಲಕ್ಷ್ಮಣರಾವ್,
ಸರ್ಕಾರದ ಅಧೀನ ಕಾರ್ಯದರ್ಶಿ,
ರೆವಿನ್ಯೂ ಇಲಾಖೆ.

* ಅಗತ್ಯವಿಲ್ಲದ ಭಾಗವನ್ನು ಹೊಡೆದುಹಾಕಿ.

The above translation of the Publice Premises (Eviction of Un-authorised Occupants) Act, 1974 (Karnataka Act No 32 of 1974) and the Publice Premises (Eviction of Un-authorised Occupants) Rules, 1980 shall be published in the Official Gazette under clause (ii) of section 5A of the Karnataka Official Language Act, 1963 (Karnataka Act 26 of 1963)

GOVERNOR OF KARNATAKA

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಮ.ರಾ. ಹೆಗಡೆ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.

RKB